ದಿನಾಂಕ**:19-05-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದದು ತಿಳಿಸಿರುತ್ತಾರೆ. ಆದುದರಿಂದ ಪಾಟೀಸವಾಲಿ ಗೆ ಇಡಲಾಯಿತು.

ಪಾಟೀ ಸವಾಲುಃ **3** ನೇ ಆರೋಪಿ ಪರ ಶ್ರೀ ಬಿಎಂ ಎ ಲ್ ಜಿ ವಕೀಲರಿಂದಃ

**1.** ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 17 ನೇ ವಯಸ್ಸಿನಿಂದ ಜಮೀನಿನ ವ್ಯವಹಾರಗಳನ್ನು ಮಾಡುತ್ತಿರುತ್ತೇನೆ. 2016 ರಲ್ಲಿ ಡಿ ಮನಿಟೈಸೇಷನ್ ಆದ ಬಗ್ಗೆ ನನಗೆ ತಿಳುವಳಿಕೆ ಇರುತ್ತದೆ. ಡಿ ಮನಿಟೈಸೇಷನ್ ಆದ ಕಾಲಕ್ಕೆ ಒಂದು ಸಾವಿರ ಮುಖ ಬೆಲೆಯ ನೋಟುಗಳನ್ನು ಆರ್ ಬಿ ಐ ತೆಗೆದು ಹಾಕಲಾಗಿತ್ತು ಎಂದರೆ ಸರಿ. ಆಧಾಯ ತೆರಿಗೆಯ ಬಗ್ಗೆ ನನಗೆ ತಿಳುವಳಿಕೆ ಇರುವುದಿಲ್ಲ. ನಾನು 17 ನೇ ವಯಸ್ಸಿನಲ್ಲಿ ಹಣಕಾಸಿನ ವ್ಯವಹಾರ ಮಾಡುತ್ತಿರಲಿಲ್ಲ. ಆದರೆ ತಂದೆ ಹೇಳಿದ ಜಮೀನಿನ ಕೆಲಸವನ್ನು ಮಾಡುತ್ತಿದ್ದೇನೆ. ನಾನು ಹಣಕಾಸಿನ ವ್ಯವಹಾರ ವನ್ನು ಯಾವ ವರ್ಷದಿಂದ ಮಾಡುತ್ತಾ ಬಂದಿದ್ದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಮಗೆ ವಾರ್ಷಿಕ ವರಮಾನ ಎಷ್ಟು ಇರುತ್ತದೆ ಎಂಬುದರ ನನಗೆ ಗೊತ್ತಿರುವುದಿಲ್ಲ, ಸಾಕ್ಷಿಯು ಮುಂದುವರಿದು ನಮ್ಮ ತಂದೆಗೆ ಗೊತ್ತಿರುತ್ತದೆ ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆ ಆಧಾಯ ತೆರಿಗೆ ಇಲಾಖೆಗೆ ವಾರ್ಷಿಕ ವಹಿವಾಟಿನ ಬಗ್ಗೆ ಮಾಹಿತಿ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ 20,000/- ಕ್ಕಿಂತ ಹೆಚ್ಚಿನ ಹಣಕಾಸಿನ ವ್ಯವಹಾರ ಮಾಡಿದರೆ ಅದನ್ನು ಚೆಕ್, ಡಿ.ಡಿ, ಅಥವಾ ನೆಪ್ಟ್ ಮುಖಾಂತರ ಪಾವತಿ ಮಾಡಬೇಕು ಎಂದರೆ ಸಾಕ್ಷಿಯು 2016 ರಲ್ಲಿ ನನಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ ನಂತರ ಅದರ ಬಗ್ಗೆ ಗೊತ್ತಿರುತ್ತದೆ ಎಂದು ಉತ್ತರಿಸಿರುತ್ತಾರೆ. ಯಾವುದೇ ವ್ಯಕ್ತಿಗೆ ಹಣವನ್ನು ಕೊಟ್ಟರೆ ರಶೀದಿ ಪಡೆದುಕೊಳ್ಳುವುದು ಕ್ರಮ ಎಂದರೆ ಸರಿ, ಸಾಕ್ಷಿಯು ಮುಂದುವರಿದು ನಾನು ರಶೀದಿ ಕೇಳಿದ್ದು, ಅವರು ಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಆರೋಪಿತರು ರಶೀದಿ ಕೊಡದೇ ಇದ್ದರೆ ಮುಂದೆ ವ್ಯವಹಾರ ಮಾಡುವುದಿಲ್ಲ ಎಂದು ಅವರ ಜೊತೆ ವ್ಯವಹಾರ ತಿರಸ್ಕಾರ ಮಾಡಿರುವುದಿಲ್ಲ ಎಂದರೆ ಸರಿ.

2. ನಾನು ಮೊದಲನೇ ಬಾರಿ ದೂರು ಕೊಡುವ ಕಾಲಕ್ಕೆ 1. ಮಹಮ್ಮದ್ ರಫಿ 2. ನಂದನ್ ಕುಮಾರ್ 3. ಇಂತಿಯಾಜ್ 4. ವಿಜಯ ಕುಮಾರ್ ಹಾಗೂ ಇತರರು ಎಂದು ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ದೂರು ಕೊಡುವ ಕಾಲಕ್ಕೆ ಇತರರು ಎಂದು ಹೇಳಿದ್ದು ಅವರ ಹೆಸರು ಮತ್ತು ವಿಳಾಸ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಮೇಲೆ ಹೇಳಿದ ನಾಲ್ಕು ಜನಗಳ ಪೈಕಿ ಆರೋಪಿ 3 ರವರು ಸ್ನೇಹಿತರು ಎಂದು ಉಳಿದವರು ಪರಿಚಯಸ್ಥರು ಮತ್ತು ಸಂಬಂದಿಕರು ಇರುವುದಿಲ್ಲ, ಸಾಕ್ಷಿಯು ಮುಂದುವರಿದು ನಂದನ್ ಕುಮಾರ್ ಇವರು ನಮ್ಮ ಜಮೀನಿನ ಪಕ್ಕದವರು ಇರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಇಂತಿಯಾಜ್ ಇವರನ್ನು ಸೇರಿಸಿ ದೂರು ಕೊಟ್ಟಿದ್ದು, ಪೋಲಿಸರು ತನಿಖೆ ಕೈಗೊಂಡು ಅವರನ್ನು ದೋಷಾರೋಪಣಾ ಪಟ್ಟಿಯಿಂದ ಕೈ ಬಿಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನನ್ನ ಮರುಹೇಳಿಕೆಯ ಮೇರೆಗೆ ಆತನನ್ನು ಕೈ ಬಿಟ್ಟಿರುತ್ತಾರೆ ಎಂದು

ಉತ್ತರಿಸಿರುತ್ತಾರೆ.

3. ನನಗೆ ರೈಸ್ ಪುಲ್ ವ್ಯವಹಾರ ಏನು ಎಂಬುದರ ಬಗ್ಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ಸದರಿ ರೈಸ್ ಪುಲ್ ಪಡೆದುಕೊಂಡರೆ ಅದರಿಂದ ಏನು ಉಪಯೋಗವಾಗುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ತಿಳಿದುಕೊಂಡಿರುವುದಿಲ್ಲ. ರೈಸ್ ಪುಲ್ ವಸ್ತುವಿನ ಬಗ್ಗೆ ದೃಶ್ಯ ಮಾಧ್ಯಮದಲ್ಲಾಗಲೀ ಅಥವಾ ಪೇಪರ್ ನಲ್ಲಾಗಲೀ ಆ ಬಗ್ಗೆ ಯಾವುದೇ ಪ್ರಕಟಣೆ ಬಂದಿರುವುದಿಲ್ಲ ಎಂದರೆ ಸರಿ. ರೈಸ್ ಪುಲ್ ವಸ್ತುವಿನ ಬಗ್ಗೆ ನನಗೆ ಇಂತಿಯಾಜ್ ಮುಖಾಂತರ ವಿಚಾರ ತಿಳಿದು ಬಂದಿರುತ್ತದೆ ಎಂದರೆ ಸರಿ. ಇಂತಿಯಾಜ್ ಇವರ ಮುಖಾಂತರ ರೈಸ್ ಪುಲ್ ವಸ್ತು ರೈತರ ಬಳಿ ಇರುವ ಬಗ್ಗೆ ನನಗೆ ತಿಳಿದು ಬಂದಿರುತ್ತದೆ ಎಂದರೆ ಸಾಕ್ಷಿಯು ಸ್ವಾಮೀಜಿ/ ರಾಜೇಶ್ ಇವರ ಮುಖಾಂತರ ನನಗೆ ತಿಳಿದು ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ನಿಪಿ-1 ರಲ್ಲಿ ರೈಸ್ ಪುಲ್ ವಸ್ತುವಿನ ಬಗ್ಗೆ ರಾಜೇಶ್ ಇವರಿಗೆ ತಿಳಿದಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ 5 ರಿಂದ 10 ನೇ ಆರೋಪಿತರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ.

4. ನಿಪಿ-1 ದೂರನ್ನು ಟೈಪ್ ಮಾಡಲು ನಾನು ಅಂಗಡಿಯಲ್ಲಿ ಕೂತು ಮಾಹಿತಿ ನೀಡಿರುತ್ತೇನೆ. ನಿಪಿ-1 ರಲ್ಲಿ ಯಾವ ದಿನಾಂಕದಂದು ದೂರನ್ನು ತಯಾರಿಸಲಾಗಿರುತ್ತದೆ ಎಂಬ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ದೂರನ್ನು ಪೋಲಿಸ್ ವರಿಷ್ಠಾಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ಕೊಡುವ ಪೂರ್ವಲ್ಲಿ ಸಬ್ ಇನ್ಸ ಪೆಕ್ಟರ್ , ನ.ರಾ ಪುರ ಪೋಲಿಸ್ ಠಾಣೆ ಇವರಿಗೆ ದೂರನ್ನು ಕೊಡಲು ಹೋಗಿದ್ದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರು ದೂರು ತೆಗೆದುಕೊಳ್ಳದ ಕಾರಣ ಪೋಲಿಸ್ ವರಿಷ್ಠಾಧಿಕಾರಿಗೆ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸಬ್ ಇನ್ಸ ಪೆಕ್ಟರ್ , ನ.ರಾ ಪುರ ಪೋಲಿಸ್ ಠಾಣೆಯವರು ದೂರನ್ನು ಸ್ವೀಕರಿಸದೇ ಇರುವ ಬಗ್ಗೆ ಸದರಿ ದೂರನ್ನು ನಿಪಿ-1 ರ ಜೊತೆ ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸಬ್ ಇನ್ಸ ಪೆಕ್ಟರ್ , ನ.ರಾ ಪುರ ಪೋಲಿಸ್ ಠಾಣೆ ಇವರಿಗೆ ದೂರನ್ನು ಅಂಗಡಿಯಲ್ಲಿ ಟೈಪ್ ಮಾಡಿಸಿದ್ದು ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ನಾನು ನೀಡಲು ಹೋದ ದೂರಿನಲ್ಲಿ ನಾಲ್ಕು ಜನ ಆರೋಪಿತರ ಹೆಸರು ಮತ್ತು ಹಣದ ಬಗ್ಗೆ ನಮೂದು ಇರಲಿಲ್ಲ ಎಂದರೆ ಸರಿಯಲ್ಲ. ನಾನು ನೀಡಲು ಹೋದ ದೂರಿನಲ್ಲಿ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದು ಪೋಲಿಸರು ಹೇಳಿದ್ದು ನಂತರ ನಾನು ವಕೀಲರನ್ನು ನ.ರಾ.ಪುರದಲ್ಲಿ ಬೇಟಿಯಾಗಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ದೂರನ್ನು ವಕೀಲರು ನನಗೆ ತಯಾರಿಸಿ ಕೊಟ್ಟಿದ್ದು ನಾನು ಅದನ್ನು ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಹೋಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಜಿಲ್ಲಾಧಿಕಾರಿಗೆ ನನಗೆ ಜಮೀನನ್ನು ಮಂಜೂರು ಮಾಡಿ ಕೊಡುವಂತೆ ಒಂದು ಮನವಿ ಅಥವಾ ದೂರನ್ನು ಬರೆಯಲು ಆಗುವುದಿಲ್ಲ. ಸಾಕ್ಷಿಯು ಮುಂದುವರಿದು ಶಾಲೆಯಲ್ಲಿ ಪತ್ರವನ್ನು ಯಾವ ರೀತಿ ಬರೆಯಬೇಕು ಎಂದು ಹೇಳಿ ಕೊಡುತ್ತಿದ್ದರು ಆ ರೀತಿ ಈ ದೂರನ್ನು ಬರೆಯಲು ಮಾಹಿತಿ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

4. ನನಗೆ ಕೂಸುಕಲ್ಲಿನಲ್ಲಿ ಸರ್ವೇ ನಂಬರ್. 10,16,27 ಮತ್ತು 28 ಹಾಗೂ ಇತರೆ

ಸರ್ವೇ ನಂಬರ್ ನಲ್ಲಿ ಜಮೀನು ಇತ್ತು. ಇತರೆ ಸರ್ವೇ ನಂಬರ್ ನಲ್ಲಿ ಎಷ್ಟು ಜಮೀನು ಇತ್ತು ನನಗೆ ಹೇಳಲು ಆಗುವುದಿಲ್ಲ. ಸರ್ವೇ ನಂಬರ್ 27 ರಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ನನಗೆ ಈಗ ಹೇಳಲು ನೆನಪಿರುವುದಿಲ್ಲ. ನಂದನ್ ಇವರು ನಮ್ಮ ಸಂಬಂಧಿಕರು ಇರುವುದಿಲ್ಲ. ತಾತ್ಕಲಿಕವಾಗಿ ಬೇಟಿಯಾದ ವ್ಯಕ್ತಿಗಳ ಜೊತೆ ನಾನು ವ್ಯವಹಾರ ಮಾಡುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರು ನಮ್ಮ ಜಮೀನಿನ ಪಕ್ಕ ಯಾವಾಗಲೂ ಓಡಾಡುತ್ತಾ ಇದ್ದುದರಿಂದ ಅವರ ಜೊತೆ ವ್ಯವಹಾರ ಮಾಡಿರುತ್ತೇನೆ. ನಂದನ್ ಕುಮಾರ್ ಇವರ ಜಮೀನಿನನ ಸರ್ವೇ ನಂಬರ್ ಮತ್ತು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಮ್ಮ ಜಮೀನಿನ ಪಕ್ಕ ಮನೆ ಮತ್ತು ಜಮೀನು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಯಾವ ದಿನಾಂಕ ಮತ್ತು ತಿಂಗಳು ನಂದನ್ ಕುಮಾರ್ ಇವರ ಮನೆಯಲ್ಲಿ ಪೂಜೆ ಇದೆ ಎಂದು ಹೇಳಿದ್ದರು ಎಂದರೆ ಸಾಕ್ಷಿಯು 9 ನೇ ತಿಂಗಳು 2016 ನೇ ಇಸವಿ ಇದ್ದು, ದಿನಾಂಕ ನೆನಪಿರುವುದಿಲ್ಲ, ಆದರೆ ಕೊನೆಯ ವಾರ ಇರುತ್ತದೆ. ನನ್ನ ಮತ್ತು ನಂದನ್ ಕುಮಾರ್ ಇವರ ಜೊತೆ ಆದ ಮಾತುಕತೆಯ ಸಂಭಾಷಣೆಯನ್ನು ನಾನು ರೆಕಾರ್ಡ ಮಾಡಿರುವುದಿಲ್ಲ ಆದರೆ ನಂತರ ಆದ ಮಾತುಕತೆಯ ಬಗ್ಗೆ ರೆಕಾರ್ಡ ಮಾಡಿರುತ್ತೇನೆ.

5. ರೈಸ್ ಪುಲ್ ವಸ್ತುವಿನಿಂದ ಕೋಟ್ಯಾಂತರ ರೂಪಾಯಿ ಲಾಭ ಇದೆ ಎಂಬುದರ ಬಗ್ಗೆ ನಾನು ನಂದನ್ ಕುಮಾರ್ ಇವರ ಬಳಿ ತಿಳಿದುಕೊಂಡಿರುತ್ತೇನೆ. ಸದರಿ ರೈಸ್ ಪುಲ್ ವಸ್ತುವಿಗೆ ಸಿಡಿಲು ಬಡಿದಾಗ ಅದು ಶಕ್ತಿ ಪಡೆದು ಅದನ್ನು ಕೋಟ್ಯಾಂತರ ರೂಪಾಯಿಯಲ್ಲಿ ಬೆಲೆ ಬಾಳುವ ಬಗ್ಗೆ ನನ್ನ ದೂರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ರೈಸ್ ಪುಲ್ ವಸ್ತು ತಾಮ್ರದ ಆಕಾರದಲ್ಲಿದ್ದು ಅದು ಯಾವ ರೀತಿ ಇರುತ್ತದೆ ಎಂದು ನನಗೆ ಹೇಳಿರುವುದಿಲ್ಲ. ನನ್ನ ದೂರಿನಲ್ಲಿ ಸದರಿ ವಸ್ತು ತಾಮ್ರದ ರೀತಿ ಇರುತ್ತದೆ ಎಂಬುದರ ಬಗ್ಗೆ ದೂರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ನಂದನ್ ಜೊತೆ ಮಾತನಾಡುವ ಕಾಲಕ್ಕೆ ಸದರಿ ರೈಸ್ ಪುಲ್ ವಸ್ತು ನಂದನ್ ಬಳಿ ಇರಲಿಲ್ಲ. ಸದರಿ ಈ ವಿಚಾರವನ್ನು ನಂದನ್ ಇವರ ಮನೆಗೆ ಔತಣ ಕೂಟಕ್ಕೆ ಹೋದಾಗ ಮಾತನಾಡಿದ್ದು ಇರುತ್ತದೆ. ಸದರಿ ವಿಚಾರವನ್ನು ಮಾತನಾಡುವ ಕಾಲಕ್ಕೆ ನಾನು ಮತ್ತು ನಂದನ್ ಮಾತ್ರ ಹಾಜರಿದ್ದೇವು. ಸದರಿ ಈ ರೀತಿ ಮಾತನಾಡಿದ ವಿಚಾರವನ್ನು ನನ್ನ ತಂದೆ ತಾಯಿ ಮತ್ತು ಸಹೋದರನಿಗೆ ತಿಳಿಸಿರುವುದಿಲ್ಲ ಆದರೆ ನಂತರ ತಿಳಿಸಿರುತ್ತೇನೆ. ವಿಜಯ್ ಕುಮಾರ್ ಇವರು ಯಾವ ದಿನಾಂಕ ತಿಂಗಳು ಮತ್ತು ವರ್ಷ ಪರಿಚಯ ಆಗಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ ಗೊತ್ತಿರುವುದಿಲ್ಲ ಆದರೆ 10 ನೇ ತಿಂಗಳು 2016 ನೇ ಇಸವಿ ಇರುತ್ತದೆ. ನಾನು ಮತ್ತು ವಿಜಯ್ ಕುಮಾರ್ ಮಾತನಾಡಿದ ಸಂಭಾಷಣೆಯನ್ನು ರೆಕಾರ್ಡ ಮಾಡಿರುವುದಿಲ್ಲ.

6. 2 ಮತ್ತು 3 ನೇ ಆರೋಪಿತರನ್ನು ಭೇಟಿಯಾದ ಎರಡು ಮೂರು ದಿನಗಳ ನಂತರ ಸದ್ಗುರು ಸೇವಾಶ್ರಮಕ್ಕೆ ಹೋಗಿರುತ್ತೇನೆ, ಆದರೆ ದಿನಾಂಕ ಮತ್ತು ವಾರ ಹೇಳಲು ಆಗುವುದಿಲ್ಲ. ದೊಡ್ಡ ಸ್ವಾಮೀಜಿ ಸಿಗದೇ ಇದ್ದ ಕಾರಣ ನಾವು ಸಣ್ಣ ಸ್ವಾಮೀಜಿಯನ್ನು ಭೇಟಿಯಾಗಿರುತ್ತೇವೆ ಎಂದರೆ ಸರಿ. ನಾನು ಸಣ್ಣ ಸ್ವಾಮೀಜಿಯನ್ನು ಭೇಟಿಯಾಗಿದ್ದು ಅವರ ಹೆಸರನ್ನು ತಿಳಿದುಕೊಂಡಿರುವುದಿಲ್ಲ ಮತ್ತು ಅವರ ಭಾವ ಚಿತ್ರವನ್ನು ಮೊಬೈಲ್ ನಲ್ಲಿ ತೆಗೆದುಕೊಂಡಿಲ್ಲ ಎಂದರೆ ಸರಿ. ಸಣ್ಣ ಸ್ವಾಮೀಜಿಯು

ಸಹ ರೈಸ್ ಪುಲ್ ವಸ್ತು ಇರುವ ಬಗ್ಗೆ ನನಗೆ ಹೇಳಿರುತ್ತಾರೆ ಎಂದರೆ ಸರಿ. ಸಣ್ಣ ಸ್ವಾಮೀಜಿಯವರ ಮುಖಾಂತರ ದೊಡ್ಡ ಸ್ವಾಮೀಜಿ ರೈಸ್ ಪುಲ್ ವಸ್ತುವಿನ ವ್ಯವಹಾರದ ಬಗ್ಗೆ ಮಾತನಾಡುತ್ತಾ ಇದ್ದರೂ ಎಂದರೆ ಸಾಕ್ಷಿಯು ದೊಡ್ಡ ಸ್ವಾಮೀಜಿಯವರು ನಮಗೆ ಪೋನ್ ಮಾಡಿ ಸಣ್ಣ ಸ್ವಾಮೀಜಿಯವರ ಬಳಿ ಮಾತನಾಡುವಂತೆ ಹೇಳಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸಣ್ಣ ಸ್ವಾಮೀಜಿಯ ಬಳಿ ನಾನು ಮತ್ತು ಇಂತಿಯಾಜ್ ಹೋಗಿ ರೈಸ್ ಪುಲ್ ವಸ್ತುವಿನ ಬಗ್ಗೆ ಮಾತನಾಡುತ್ತಿದ್ದೇವು ಎಂದರೆ ಸಾಕ್ಷಿಯು ವಿಜಯ ಕುಮಾರ್ ಇವರೇ ಮಾತನಾಡುತ್ತಾ ಇದ್ದರೂ ಎಂದು ಉತ್ತರಿಸಿರುತ್ತಾರೆ. ನಾನು ಮತ್ತು ನನ್ನ ಸ್ನೇಹಿತ ಇಂತಿಯಾಜ್ ಇವರು ಹೊಸದುರ್ಗಕ್ಕೆ ಹೋಗಿರುತ್ತೇವೆ. ನಮಗೆ ಸಣ್ಣ ಸ್ವಾಮೀಜಿಯವರು ರೈಸ್ ಪುಲ್ ವಸ್ತುವನ್ನು ಪರೀಕ್ಷಿಸಲು ಎರಡು ಕಂಪನಿಯವರು ಬರಬೇಕು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎರಡು ಕಂಪನಿಯ ಪೈಕಿ ಡಾಕ್ಟರ್ ವಿ.ಕೆ. ಸಿಂಗ್ ಅವರ ಬಳಿ ಹೇಳಿದ್ದು, ಇನ್ನೊಂದು ಕಂಪನಿಯ ಹೆಸರನ್ನು, ಚೀಫ್ ಆಫೀಸರ್ ಮತ್ತು ಅದರ ಎಕ್ಸೂಕ್ಯುಟೀವ್ ಆಫೀಸರ್ ಯಾರು ಎಂಬುದರ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಸದರಿ ಕಂಪನಿಯ ಪ್ರಧಾನ ಕಚೇರಿ ಯು.ಕೆ ಯಲ್ಲಿದ್ದು, ಅದರ ಬ್ರಾಂಚ್ ಆಫೀಸ್ ದೆಹಲಿಯಲ್ಲಿ ಇರುವುದಾಗಿ ಹಾಗೂ ಮಹಮ್ಮದ್ ರಫೀ ಇವರು ಬೆಂಗಳೂರು ಪ್ರತಿನಿಧಿಯಾಗಿ ಇರುವ ಬಗ್ಗೆ ಹೇಳಿದ್ದರು.

7. ಸದರಿ ಕಂಪನಿಯ ಪೋನ್ ನಂಬರ್ ಮತ್ತು ವಿಳಾಸವನ್ನು ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರು ಕೊಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಸದರಿ ಕಂಪನಿಯ ಮೊಬೈಲ್ ನಂಬರ್ ಬೇಕು ಎಂದು ನಾನು ಅವರನ್ನು ಕೇಳಿರುತ್ತೇನೆ. ಸಾಕ್ಷಿಯು ಮುಂದುವರಿದು ಮೊಹಮ್ಮದ್ ರಫೀಯವರು ಕಂಪನಿಯ ಪ್ರತಿನಿಧಿ ಎಂದು ಪರಿಚಯ ಮಾಡಿಸಿರುತ್ತಾರೆ. ಮಹಮ್ಮದ್ ರಫೀಯವರ ಮುಖಾಂತರ ಡಾಕ್ಟರ್ ವಿ.ಕೆ. ಸಿಂಗ್ ಇವರ ನಂಬರ್ ಕೊಡುವಂತೆ ಕೇಳಿರುತ್ತೇನೆ ಆದರೆ ಮಹಮ್ಮದ್ ರಫೀ ನಾವೇ ವ್ಯವಹಾರವನ್ನು ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ನಾನು ಮಹಮ್ಮದ್ ರಫೀಯವರ ಕಂಪನಿ ವ್ಯವಹಾರವನ್ನು ನೋಡಿಕೊಳ್ಳುತ್ತಾರೆ ಎಂದು ಅವರನ್ನು ಕೇಳಿರುತ್ತೇನೆ ಮತ್ತು ಅವರು ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ತಾಲ್ಲೂಕು ದಂಡಾದಿಕಾರಿಗಳ ಮುಂದೆ ನನ್ನನ್ನು ಕರೆಸಿರುವುದಿಲ್ಲ ಎಂದರೆ ಸರಿ.

8. ರೈಸ್ ಪುಲ್ ವಸ್ತು ರೈತರ ಬಳಿ ಇರುತ್ತದೆದ ಎಂಬ ಬಗ್ಗೆ ರೈತರನ್ನು ಸಣ್ಣ ಸ್ವಾಮೀಜಿಯ ಬಳಿ ಕರೆಸಿದ್ದರು ಎಂದರೆ ಸಾಕ್ಷಿಯು ಸಣ್ಣ ಸ್ವಾಮೀಜಿಯವರೇ ಕರೆ ತಂದಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ರೈತರನ್ನು ನಾನು ಮಾತನಾಡಿಸಿರುತ್ತೇನೆ. ನಾನು ರೈತರನ್ನು ಉಭಯ ಕುಶಲೋಪರಿ ಹಾಗೂ ನಮ್ಮ ಮತ್ತು ಅವರ ಪರಿಚಯ ಮಾಡಿಕೊಂಡಿರುವುದಿಲ್ಲ. ನಾನು ರೈಸ್ ಪುಲ್ ವಸ್ತುವಿನ ಬೆಲೆಯ ಬಗ್ಗೆ ರೈತರ ಬಳಿ ವಿಚಾರಿಸಿದ್ದು, ಅವರು ಹತ್ತು ಕೋಟಿ ಬೇಕು ಎಂದು ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ನಾನು ರೈತರ ಬಳಿ ರೈಸ್ ಪುಲ್ ವಸ್ತುವನ್ನು ಏಕೆ ಮಾರಾಟ ಮಾಡುತ್ತೀರಿ ಎಂಬುದರ ಬಗ್ಗೆ ವಿಚಾರಿಸಿರುತ್ತೇನೆ. ಸದರಿ ರೈತರು ಸದರಿ ವಸ್ತು ಕೊಟ್ಟಿಗಟ್ಟಲೇ

ಬೆಲೆ ಬಾಳುವುದರಿಂದ ಮಾರಾಟ ಮಾಡುತ್ತೇವೆ ಎಂದು ಹೇಳಿದ್ದರು. ಸದರಿ ರೈತರ ಬಳಿ ರೈಸ್ ಪುಲ್ ವಸ್ತುವಿನಿಂದ ಏನು ಉಪಯೋಗವಾಗಿರುತ್ತದೆ ಎಂಬುದರ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ.

9. ನಾನು ಅಶೋಕ್ ಇಂಟರ್ ನ್ಯಾಷನಲ್ ಹೋಟೆಲ್ ನಲ್ಲಿ ಹಣ ಕೊಡುವ ಕಾಲಕ್ಕೆ ನಾನು ಇಂತಿಯಾಜ್, ವಿಜಯ ಕುಮಾರ್ ಮತ್ತು ಮೊಹಮ್ಮದ್ ರಫೀ ಹಾಜರಿದ್ದೆವು. ನಾನು ಹಣವನ್ನು ದಿಃ21.10.2016 ರಂದು ಮೊಹಮ್ಮದ್ ರಫೀ ಇವರಿಗೆ ಹಣ ಕೊಟ್ಟಿರುತ್ತೇವೆ. ನಾನು 24 ಲಕ್ಷ ಹಣವನ್ನು ನನ್ನ ತಂದೆ, ನನ್ನ ಸ್ನೇಹಿತ ಹಾಗೂ ನನ್ನ ಹೆಂಡತಿ ಕಡೆಯಿಂದ ಪಡೆದುಕೊಂಡಿರುತ್ತೇನೆ. ನಾನು 24 ಲಕ್ಷ ಹಣವನ್ನು ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ನಮ್ಮ ತಂದೆ ವಿಚಾರಿಸಿದ್ದು ನಾನು ಆದರೆ ರೈಸ್ ಪುಲ್ ವ್ಯವಹಾರದ ಬಗ್ಗೆ ಅವರಿಗೆ ಹೇಳಿರುವುದಿಲ್ಲ. ನಾನು ಎರಡನೇ ಬಾರಿ 50 ಲಕ್ಷದ 50 ಸಾವಿರ ಹಣ ಕೊಡುವ ಕಾಲಕ್ಕೆ ನಮ್ಮ ತಂದೆ ಸದರಿ ವ್ಯವಹಾರದ ಬಗ್ಗೆ ವಿಚಾರ ಮಾಡಿರುತ್ತಾರೆ. ಆ ಕಾಲಕ್ಕೆ ನಮ್ಮತಂದೆಗೆ ರೈಸ್ ಪುಲ್ ವಸ್ತುವಿನ ವ್ಯವಹಾರದ ಬಗ್ಗೆ ನಮ್ಮ ತಂದೆಗೆ ಹೇಳಿರುತ್ತೇನೆ. ನಮ್ಮ ತಂದೆ ಆ ಕಾಲಕ್ಕೆ ಸದರಿ ವ್ಯವಹಾರ ಸುಳ್ಳು ಎಂದು ನನಗೆ ಬೈದಿರುತ್ತಾರೆ. ಆದರೂ ಸಹ ನಾನು ಸದರಿ ವ್ಯವಹಾರವನ್ನು ಬಿಡಲಿಲ್ಲ ಎಂದರೆ ಸಾಕ್ಷಿಯು ಅವರು ನನ್ನನ್ನು ನಂಬಿಸಿದ್ದರು ಎಂದು ಉತ್ತರಿಸಿರುತ್ತಾರೆ. ದಿಃ19-12-2016 ರಂದು ನಾನು 20 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ನಮ್ಮ ತಂದೆ ಸಮಕ್ಷಮ 20 ಲಕ್ಷ ಹಣವನ್ನು ಕೊಡುವ ಕಾಲಕ್ಕೆ ರಶೀದಿಯನ್ನಾಗಲೀ ಅಥವಾ ಫೋಟೋವನ್ನಾಗಲೀ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ.

10. ಸ್ಟಾಂಪ್ ಯಾರ ಹೆಸರಿನಲ್ಲಿ ಮತ್ತು ಎಲ್ಲಿಂದ ತರಲಾಗಿತ್ತು ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರಿದು ಅವರೇ ತಂದಿದ್ದರು ಎಂದು ಉತ್ತರಿಸಿರುತ್ತಾರೆ. ಪೋಲಿಸರು ತನಿಖೆಯ ಕಾಲಕ್ಕೆ ನನ್ನನ್ನು ಕರೆದಾಗಲೆಲ್ಲಾ ನಾನು ಹೋಗುತ್ತಿದ್ದೆ ಎಂದರೆ ಸರಿ. ನಾನು ಖಾಲಿ ಸ್ಟಾಂಪ್ ಪೇಪರ್ ಗೆ ರುಜು ಹಾಕಲು ಕೊಟ್ಟಿದ್ದು ತನಿಖೆಯ ಕಾಲಕ್ಕೆ ಪೋಲಿಸರು ಅವುಗಳನ್ನು ವಶ ಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಆರೋಪಿತರಿಗೆ ಮೇಲೆ ಹೇಳಿದಂತೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಅದು ಶುದ್ಧ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಖಾಲಿ ಸ್ಟಾಂಪ್ ಪೇಪರ್ ಗೆ ನನ್ನ ರುಜುವನ್ನು ಪಡೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಓ

Sd/-xx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ